ಇಟ್ಟುಕೊಂಡು ಇರುವುದಕ್ಕೆ ಅದರ ವಿವರಗಳನ್ನು ಹೇಳಿದರೆ ನಾವು ಒಪ್ಪಬಹುದು. ಅಗ್ರಿಕಲ್ಚರ್ ಇಲಾಖೆ ಅಧಿಕಾರಿಗಳು ಕೊಆಪರೇಟಿವ್ ಏಜೆನ್ಸಿ ಮೂಲಕ ಕೊಡುವಾಗ ವಿಫಲರಾಗಿದ್ದಾರೆ ಸಾಕಷ್ಟು ಸ್ಟಾಕ್ ಗೊಬ್ಬರ ಇದ್ದರೆ ರೈತರು ಕೇಳುವಷ್ಟು ಏತಕ್ಕೆ ಕೊಡಲಾರರು ಎಂದು ಕೇಳುತ್ತೇನೆ.

ಛೇರ್‌ಮನ್.—ಮಾನ್ಯ ಸದಸ್ಯರು ಹೇಳುವುದನ್ನು ಗಮನದಲ್ಲಿಟ್ಟು ತಾವು ಈ ವಿಚಾರವನ್ನು ಚರ್ಚೆ ಮಾಡುವಾಗ ಗಣನೆಗೆ ತೆಗೆದುಕೊಳ್ಳಬೇಕು.

(ii) re ; Scarcity of Chemical Mannures in Hassan District

SRI K. H. HANUMEGOWDA.—Sir, I would like to call the attention of the Minister for Agriculture regarding scarcity of Chemical mannures in Hassan District.

SRI S. BANGARAPPA.—(Minister for Agriculture) Sir, I would like to make the following statement.

Except for Ammonium Sulphate, there is no shortage of fertiliser in the State. As Ammonium Sulphate is imported and allotted to the State by Government of India, the quantity of Ammonium Sulphate available is restricted to the quantity allotted by Government of India. To some extent, complexes such as 17: 17 :17 and 19: 19: 19 are also in short supply because of difficulty in transporting these complex fertilisers into Karnataka due to nonavailability of railway wagons for this purpose. There are adequate stocks of Di-ammonium Phosphate, Urea, Calcium Ammonium Nitrate, Muriate of potash and single Super Phosphate in the State at present and a combination of these fertilisers can be utilised in place of complex fertilisers. The Karnataka Agro Industries Corporation and Karnataka State Co-operative Marketing Federation have been directed to stock enough quantities of DAP, Urea. Muriate of Potash and single Super Phosphate at Hassan. As on 1-6-1980, 3265 tonnes of fertilisers have been stored in Hassan District.

As per Government of India telegram dated 8-6-80, the sale of Ammonium Sulphate and Calcium Ammonium Nitrate has been suspended untill further instructions pending revision of price. The Karnataka Agro Industries Corporation and Karnataka State Co-operative Marketing Federation which had suspended the sale of other fertilisers for a day or two pending the announcement of revised prices by Government of India and have now commenced their sales.

ಶ್ರೀ ಕೆ.ಎಚ್., ಹನುಮೇಗೌಡ (ಹಾಸನ).—ಅಧ್ಯಕ್ಷರೆ, ೧-೬-೧೯೮೦ರಲ್ಲಿ ೩೨೬೫ ಮೂಟೆ ಫರ್ಟಿಲೈಸರ್ ಹಾಸನದಲ್ಲಿ ಸ್ಟಾಕ್ ಇದೆ ಎಂದು ಹೇಳುತ್ತಾರೆ, ಸುಮಾರು ೨೦ ದಿವಸಗಳಿಂದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಒಂದು ಕಡೆ ಕೂಡ ಸ್ಟಾಕ್ ಇಲ್ಲವೆಂದು ಅನೇಕ ಜನ ರೈತರು ಎಲ್ಲಾ ಸೊಸೈಟಿಗಳಿಗೂ ಅಲೆದು ವಾಪಸ್ ಹೋಗಿದ್ದಾರೆ. ಆದರೆ ಮಾನ್ಯ ಸಚಿವರು ಹೇಳುತ್ತಿದ್ದಾರೆ ಸ್ಟಾಕ್ ಇತ್ತು ಎಂದು, ಇದು ಸತ್ಯಕ್ಕೆ ದೂರವಾದ ವಿಚಾರವೆಂದು ತಿಳಿಸಿ

ಬೇಕಾಗುತ್ತದೆ. ಆಗ್ರೋ ಇಂಡಸ್ಟ್ರೀಸ್ ಮತ್ತು ಫೆಡರೇಷನ್‌ಗಳಲ್ಲಿ ನಾನಂ ವೆರಿಫೈ ಮಾಡಿದ್ದೇನೆ ಸ್ವಲ್ಪವೂ ಕೂಡ ಸ್ಟಾಕ್ ಇಲ್ಲ ಸುಮಾರು ೮-೧೦ ದಿವಸಗಳಿಂದ ಇಲ್ಲ. ಇನ್ನು ಎರಡನೆ ವಿಚಾರ ಏನು ಸ್ಟಾಕ್ ಇದೆಯೆಂದು ಹೇಳುತ್ತಾರೆ ಇದು ಸಿಕ್ಕುತ್ತಿಲ್ಲ ಜೊತೆಗೆ ಬಿತ್ತನೆ ಪುರುವಾಗಿ ೮-೧೦ ದಿನಗಳಾಗಿವೆ, ನಾಲ್ಕು ದಿನಗಳ ಹಿಂದೆ ಇರಲಿಲ್ಲ. ಈಗ ಆಲೂಗೆಡ್ಡೆ ಮತ್ತು ಹೈಬ್ರೀಡ್ ಬೆಳೆಗಳು ಮಾಡುವಂತೆ ಸಮಯ ಮತ್ತು ರಾಗಿಯನ್ನು ಕೂಡ ಬಿತ್ತುವ ಸಮಯ. ಆದರೆ ಇಲಾಖೆಯವರು ಸೂಕ್ತಸಮಯದಲ್ಲಿ ರೈತರಿಗೆ ಸಹಾಯ ಮಾಡುವುದರಲ್ಲಿ ವಿಫಲರಾಗಿದ್ದಾರೆ ಆದರೂ ಮಾನ್ಯ ಸಚಿವರು ವಿವರಗಳನ್ನು ಇಡುತ್ತಿದ್ದಾರೆ. ಮೂರನೆಯದಾಗಿ ಸೋನೆ ಮಳೆ ಪ್ರಾರಂಭವಾಗಿದೆ ಹೈಬ್ರೀಡ್ ಜವಾರ್ ಪೇಜಸ್‌ಗೆ ಸೆಕೆಂಡ್ ಪೆನಿಸ್ಯೂರ್ ಕೊಡಬೇಕು ಯೂರಿಯಾ ಕೂಡ ಸ್ಟಾಕ್ ಇಲ್ಲ, ಆಲೂಗೆಡ್ಡೆಗೆ ಟಾಪ್ ಕ್ವಾಲಿಟಿ ಬರಬೇಕಾದರೆ ಅಮೋನಿಯಂ ಸಲ್ಫೇಟ್ ಹಾಕಬೇಕು ಇಲ್ಲದೆ ಹೋದರೆ ಅದು ಕೊಳೆತು ಹೋಗುತ್ತದೆ. ಈ ಅಮೋನಿಯಂ ಸಲ್‌ಫೇಟ್ ೧೦೦ರಿಂದ ೨೦೦ರೂಪಾಯಿಗೆ ಮಾರಾಟವಾಗುತ್ತಿದೆ. ಕನಿಷ್ಟ ಯೂರಿಯಾ ಕೂಡ ಸ್ಟಾಕ್ ಇಲ್ಲ ಆದರೆ ಅದೇ ೧೭೫ರಿಂದ ೨೦೦ ರೂಪಾಯಿಗೆ ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಸ್ಟಾಕ್ ಇಲ್ಲದೆ ಇದ್ದರೆ ಇಂತಹ ಸಂದರ್ಭದಲ್ಲಿ ಎಲ್ಲಿಂದ ಬರುತ್ತದೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ದುಡ್ಡು ಜಾಸ್ತಿ ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಆದರೆ ಅದೇ ಕಂಟ್ರೋಲ್ ರೇಟಿಗೆ ಸಿಕ್ಕುತ್ತಿಲ್ಲ. ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ ಸುಮಾರು ೧೫-೨೦ ಸಾವಿರ ಎಕರೆ ಭೂಮಿಗೆ ಅಮೋನಿಯಾ ಸಲ್‌ಫೇಟ್ ಗೊಬ್ಬರ ಬೇಕು ಇಲ್ಲದೆ ಇದ್ದರೆ ಆಲೂಗೆಡ್ಡೆ ಬೆಳೆ ಬರುವುದಿಲ್ಲ, ಯೂರಿಯಾ ಹಾಕಿದರೆ ಅದು ಕೊಳೆತು ಹೋಗುತ್ತದೆ. ಇದು ಬಾಯಿ ಮತ್ತು ಕಲ್ತತ್ತಾಗಳಿಗೆ ರಪಾನೆ ಆಗಬೇಕು. ಕೀಪಿಂಗ್ ಕ್ವಾಲಿಟಿ ಇರಬೇಕಾದರೆ ಅಮೋನಿಯಾ ವನ್ನೇ ಉಪಯೋಗಿಸಬೇಕಾಗುತ್ತದೆ. ಇವರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ಎಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಹಾಸನ ಜಿಲ್ಲೆಯಲ್ಲಿ ೧೨೬೫ ಟನ್ ಫರ್ಟಿಲೈಜರ್ ಸ್ಟಾಕ್ ಇದೆ ಎಂದು ನಾನು ಈಗಾಗಲೆ ತಿಳಿಸಿದ್ದೇನೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಹುಣುಮೇಗೌಡರು ಹೇಳುತ್ತಿದ್ದಾರೆ ಸ್ಟಾಕ್ ಇಲ್ಲ ಏಂದು. ಇದನ್ನು ನಾನು ಪುನಃ ವೆರಿಫೈ ಮಾಡಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನದಲ್ಲಿ ಮಾರ್ಕೆಟ್ ಫೆಡರೇಷನ್‌ನಲ್ಲಿ ಅಮೋನಿಯಂ ಸಲ್ಫೇಟ್ ಡಿ-ಅಮೋನಿಯಮ್ ಫಾಸ್ಫೇಟ್, ಕಾಂಪ್ಲೆಕ್ಸ್ ಫರ್ಟಿಲೈಜರ್ಸ್, ಇರಲಿಲ್ಲ ಎಂದು ಹೇಳಿದ್ದಾರೆ. ದಯಮಾಡಿ ವೆರಿಫೈ ಮಾಡಿ.

ಶ್ರೀ ಎಸ್. ಬಂಗಾರಪ್ಪ. —೩೨೬೫ ಟನ್ ಗೊಬ್ಬರ ಸ್ಟಾಕ್ ಇದೆ ಎಂದು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರು ಸ್ಟಾಕ್ ಇಲ್ಲ ಎಂದು ಹೇಳಿದ್ದಾರೆ ಎಂದು ಹೇಳಿದರು. ಆ ರೀತಿ ಅವರು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ. ಇದು ಬಹಳ ಸೀರಿಯಸ್ ಮ್ಯಾಟರ್ ಆಗುತ್ತದೆ. ಅದನ್ನು ವೆರಿಫೈ ಮಾಡಿಸುತ್ತೇನೆ. ಅಲ್ಲಿ ಗೊಬ್ಬರ ಇರಲೇ ಬೇಕು. ಅನುಮಾನ ಪಡಬೇಕಾಗಿಲ್ಲ.

ಶ್ರೀ ಕೆ ಎಚ್. ಹನುಮೇಗೌಡ. ಹಾಸನ ಜಿಲ್ಲೆಯಲ್ಲಿ ಟೌನಿಗೆ ಸಂಬಂಧಪಟ್ಟಹಾಗೆ ನಾನು ವೆರಿಫೈ ಮಾಡಿಸಿದ್ದೇನೆ. ಬೇರೆ ತಾಲ್ಲೂಕುಗಳಲ್ಲಿ ಇದೆಯೋ ಏನೋ ನನಗೆ ಗೊತ್ತಿಲ್ಲ. ಅದು ಬೇಕಾದ ಕಡೆಗೆ ಇಲ್ಲದೆ ಬೇಡವೇ ಇರುವ ಕಡೆ ಇದ್ದರೆ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಫರ್ಟಿಲೈಜರ್ ಇದ್ದರೆ ಅದು ಎಲ್ಲೂ ಹೋಗುವುದಿಲ್ಲ ಗೋಡೌನ್‌ನಲ್ಲಿ ಇರಬಹುದು. ಹಾಸನ ಡಿಸ್ಟ್ರಿಕ್ಟಿಗೆ ಏನು ಅಲಾಟ್‌ಮೆಂಟ್ ಇರುತ್ತದೆ ಅದು ಅಲ್ಲಿ ಇದ್ದೇ ಇರುತ್ತದೆ. ಎಲ್ಲಿ ಡಿಮ್ಯಾಂಡ್ ಇರುತ್ತದೆ ಅಲ್ಲಿಗೆ ಕಳುಹಿಸುತ್ತಾರೆ. ಈಗ ಬಂದು ವೇಳೆ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಅರಸೀಕೆರೆಯಲ್ಲಿ ಸ್ಟಾಕ್ ಇರಬಹುದು, ಚನ್ನರಾಯ ಪಟ್ಟಣದಲ್ಲಿ ಸಾಕ್ಸ್ ಇರಬಹುದು. ಆದರೆ ಆದನ್ನು ಯಾವರೀತಿ ಎಲ್ಲೆಲ್ಲಿ ಡಿಸ್ಟ್ರಿಬ್ಯೂಟ್ ಮಾಡಬೇಕೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಆತಂಕ ಪಡಬೇಕಾಗಿಲ್ಲ. ಫರ್ಟಿಲೈಜರ್ಸ್ ವಿತರಣೆಯ ವ್ಯವಸ್ಥೆಯನ್ನು ಮಾಡೋಣ.

ಮತ್ತೊಂದು ಮಾತನ್ನು ಹೇಳಿದ್ದಾರೆ. ಆಲೂಗಡ್ಡೆಗೆ ಅಮೋನಿಯಂ ಸಲ್ಫೇಟ್ ಬೇಕು ಎಂದು ಹೇಳಿದ್ದಾರೆ. ನಿಜ ಆಲೂಗಡ್ಡೆ ಬೆಳೆಗೆ ಹೆಚ್ಚು ಅಮೋನಿಯಂ ಸಲ್ಫೇಟ್ ಬೇಕು. ಹಾಸನ ಮತ್ತು ಕೋಲಾರ ಜಿಲ್ಲೆಯಲ್ಲಿ ಆಲೂಗಡ್ಡೆಯನ್ನು ಹೆಚ್ಚು ಬೆಳೆಯುತ್ತಾರೆ. ಈಗ ಅಮೋನಿಯಂ ಸಲ್ಫೇಟಿನ ಕೊರತೆ ನಮಗೆ ಇದೆ. ಆದರೂ ಸಹ ನಾವೂ ಹಾಸನ ಡಿಸ್ಟ್ರಿಕ್ಟಿಗೆ ಅಮೋನಿಯಂ ಸಲ್ಫೇಟ್ ಜಾಸ್ತಿ ಕೊಡುತ್ತಿದ್ದೇವೆ. ಅಲ್ಲಿಗೆ ಜಾಸ್ತಿ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ಹಾಸನ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಸ್ಟಾಕ್ ಇದ್ದರೂ ಕೂಡ ಅದನ್ನು ತಂದು ಹಾಸನ ಟೌನಿನಲ್ಲಿ ಕೊಡಬೇಕು. ಅದನ್ನು ಕಳುಹಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಒಂದು ಟನ್ನಿಗೆ ೧೭೫–೨೦೦ ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಅಮೋನಿಯಂ ಸಲ್ಫೇಟ್ ಸರ್ಕಾರಿ ಡಿಪೋಗಳಲ್ಲಿ ಸೊಸೈಟಿಗಳಲ್ಲಿ ಸಿಕ್ಕುವುದಿಲ್ಲ. ಇದು ನಮ್ಮ ಇಂಡಿಯಾದೇಶದಲ್ಲಿ ಪಂಜಾಬ್ ಮತ್ತೆ ಕೆಲವು ರಾಜ್ಯಗಳಲ್ಲಿ ೪–೬ ಪ್ರೈವೇಟ್ ಫ್ಯಾಕ್ಟರಿಗಳವರು ತಯಾರು ಮಾಡುತ್ತಾರೆ. ಆದ್ದರಿಂದ ನನ್ನ ಆತಂಕ ಏನೆಂದರೆ ಒಂದು ಟನ್ನಿಗೆ ೨೦೦ ರೂಪಾಯಿಗಳನ್ನು ಕೊಟ್ಟರೆ ಎಷ್ಟು ಬೇಕಾದರೂ ಸಿಕ್ಕುತ್ತದೆ. ಆದರೆ ಕಂಟ್ರೋಲ್ ರೇಟಿಗೆ ಏತಕ್ಕೆ ಸಿಕ್ಕುವುದಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಕೇಂದ್ರ ಸರ್ಕಾರದವರು ನಮ್ಮ ಇಂಡಿಯಾದಲ್ಲಿ ತಯಾರಾಗತಕ್ಕ ಅಮೋನಿಯಂ ಸಲ್ಫೇಟ್ ಏನಿದೆ ಇದರಲ್ಲಿ ೫೦ ಪರ್ಸೆಂಟ್ ಅನ್ನು ಕಂಟ್ರೋಲ್ ಮಾಡುತ್ತಾರೆ. ಉಳಿದುದನ್ನು ಕಂಟ್ರೋಲ್ ಮಾಡುವುದಿಲ್ಲ. ಆದ್ದರಿಂದ ಹೊರಗಡೆ ಈ ಗೊಬ್ಬರ ಸಿಕ್ಕುತ್ತದೆ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕು. ಅವರಿಗೆ ಇದರ ಬಗ್ಗೆ ಹೇಳೋಣ. ಉತ್ಪತ್ತಿಯಾದಂತಹ ಗೊಬ್ಬರದಲ್ಲಿ ೫೦–೬೦ ಪರ್ಸೆಂಟ್ ಹೊರಗಡೆ ಕೊಟ್ಟು ಉಳಿದಂತಹ ೩೦–೪೦ ಪರ್ಸೆಂಟ್ ಗೊಬ್ಬರವನ್ನು ಸರ್ಕಾರದವರು ಕೋಟಾಕ್ಕೆ ಕೊಡುತ್ತಾರೆ. ಆದ್ದರಿಂದ ತೊಂದರೆ ಬರುತ್ತದೆ. ಬೇರೆ ಏಜೆಂಟ್‌ಗಳು ಹೊರಗಡೆ ಮಾರಿ ಹೆಚ್ಚು ಲಾಭ ಸಂಪಾದನೆ ಮಾಡಿರಬಹುದು. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಹಾಸನ ಜಿಲ್ಲೆಗೆ ಹೆಚ್ಚು ಗೊಬ್ಬರವನ್ನು ಕೊಡಬೇಕು. ಏತಕ್ಕೆಂದರೆ ಅಲ್ಲಿ ರೈತರು ಹೆಚ್ಚು ಆಲೂಗಡ್ಡೆಯನ್ನು ಬೆಳೆಯುತ್ತಾರೆ. ಹಾಗೆಯೇ ಕೋಲಾರ ಜಿಲ್ಲೆಗೂ ಹೆಚ್ಚು ಗೊಬ್ಬರವನ್ನು ಕೊಡಬೇಕಾಗುತ್ತದೆ.

Matter under Rule 312

re : Closure of Samyukta Karnataka Bangalore Edition.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಯುಕ್ತ ಕರ್ನಾಟಕ ದಿನ ಪತ್ರಿಕೆ ಬೆಂಗಳೂರು ಆವೃತ್ತಿ ನಿಂತು ಹೋಗಿದೆ. ಪುನಃ ಇದನ್ನು ಆರಂಭಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ? ಹಿಂದಿನ ಅಧಿವೇಶನದಲ್ಲಿ ಇದರ ಬಗ್ಗೆ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ನಮಗೆ ಭರವಸೆಯನ್ನು ಕೊಟ್ಟಿದ್ದರು ಆದರೂ ಸಹ ಇನ್ನೂ ಈ ಸಂಯುಕ್ತ ಕರ್ನಾಟಕ ಬೆಂಗಳೂರಿನ ಆವೃತ್ತಿ ಆರಂಭವಾಗಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಆದ್ದರಿಂದ ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಗಂಗಾಧರ್.—ಈ ಸಂಯುಕ್ತ ಕರ್ನಾಟಕ ಪತ್ರಿಕಾಲಯದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ನೌಕರ ಬೇಸರಪಟ್ಟುಕೊಂಡು ಕನ್ನಂಬಾಡಿಯಲ್ಲಿ ಬಿದ್ದು ಸತ್ತು ಹೋಗಿದ್ದಾನೆ. ಇದರ ಬಗ್ಗೆ ನಾನು ಹಿಂದೆ ಕೂಡ ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವನ ಕುಟುಂಬದವರಿಗೆ ನಿಯಮದ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಸಿ. ಎಂ ಇಬ್ರಾಹಿಂ (ಕಾರ್ಮಿಕ ಸಚಿವರು).—ಸರ್ಕಾರ ಈಗ ಸುಮಾರು ಎರಡು ತಿಂಗಳಿಂದ ಸತತವಾಗಿ ಪ್ರಯತ್ನ ಪಡುತ್ತಿದೆ. ಹೋದ ಸಲ ಈ ಸದನದಲ್ಲಿ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೂಡ ನಾನು ಕೊಟ್ಟಿದ್ದೇನೆ. ಈ ಪತ್ರಿಕೆಗೆ ಸಂಬಂಧಪಟ್ಟಂತೆ ವಿವಾದವೊಂದು ಧಾರವಾಡದ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿರುವುದರಿಂದ ಅಲ್ಲಿ ತೀರ್ಪು ಕೊಡದೆ ಇದರಲ್ಲಿ ನೇರವಾಗಿ ಸರ್ಕಾರ ಪ್ರವೇಶ